**ಕರ್ನಾಟಕ ಸರ್ಕಾರ**

**(ಪಿ.ಆರ್.ಪಿ.67)**

**ಹೇಳಿಕೆ ಹಾಳೆ**

**(ಆರ್.ಪಿ.ಸಂಖ್ಯೆ 57)**

**ನಮೂನೆ ಸಂಖ್ಯೆ 4**

## ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ

## ಸ್ಪೆಷಲ್ ಕೇಸ್ ನಂಬರ್ : 28/2010

**ಫ್ರಾಸಾ- 30 ಚಾಸಾ- 41**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಪ್ರಸನ್ನಕುಮಾರ್ |
| ತಂದೆಯ ಹೆಸರುಃ | : | ಪದ್ಮನಾಭ ಪಿಳ್ಳೈ |
| ವಯಸ್ಸುಃ | : | 61 ವರ್ಷ |
| ಉದ್ಯೋಗಃ | : | ವ್ಯಾಪಾರ |
| ವಾಸ | : | ಸಕಲೇಶಪುರ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 22-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನನಗೆ 1ನೇ ಆರೋಪಿ ರವೀಂದ್ರನಾಥ್ ರವರ ಪರಿಚಯವಿದೆ. ನ್ಯಾಯಾಲಯದ ಮುಂದಿರುವ 2ನೇ ಆರೋಪಿತರ ಪರಿಚಯವಿಲ್ಲ.

2.2009ರಲ್ಲಿ ಸಕಲೇಶಪುರದ ಅಶೋಕ ರಸ್ತೆಯಲ್ಲಿ ಎನ್ ವಿ ಆರ್ ಕಾಂಡಿಮೆಂಟ್ಸ್ ಅಂಗಡಿಯನ್ನು ನಡೆಸುತ್ತಿದ್ದೆ. ನನ್ನ ಅಂಗಡಿಯಿಂದ ಎನ್ ಎಸ್ ಮೆಡಿಕಲ್ಸ್ ಸುಮಾರು 100 ಮೀಟರ್ ದೂರದಲ್ಲಿ ಇತ್ತು. ಅಲ್ಲಿಗೆ ನಾನು ಔಷಧಿ ಖರೀದಿಸಲು ಹೋಗುತ್ತಿದ್ದೆ. ಸಮಯದಲ್ಲಿ ನ್ಯಾಯಾಲಯದ ಮುಂದಿರುವ 2ನೇ ಆರೋಪಿತರನ್ನು ನಾನು ನೋಡಿಲ್ಲ. ಸದರಿ ಆರೋಪಿತರು ನನ್ನ ಅಂಗಡಿಗೆ ಬರುತ್ತಿದ್ದರಾ ಎಂದು ಈಗ ನೆನಪಿಲ್ಲ. 2ನೇ ಆರೋಪಿತರು

ನನಗೆ ತಾನು ಎನ್ ಎಸ್ ಮೆಡಿಕಲ್ಸ್ ನಿಂದ Bupregesicಎಂಬ ಇಂಜೆಕ್ಷನ್ ನನ್ನು ತೆಗೆದುಕೊಂಡು ಹೋಗಲು ಬರುತ್ತಿದ್ದೆನೆಂದು ಎಂದೂ ಹೇಳಿರಲಿಲ್ಲ. 1ನೇ ಆರೋಪಿತರನ್ನು ಪೊಲೀಸರು ದಸ್ತಗಿರಿ ಮಾಡಿದರು ಎನ್ನುವ ವಿಚಾರ ನನಗೆ ಗೊತ್ತಿದೆ. ಔಷಧಿ ಮಾರಾಟಕ್ಕೆ ಸಂಬಂಧಿಸಿದಂತೆ ಅವರನ್ನು ದಸ್ತಗಿರಿ ಮಾಡಿದ್ದಾರೆ ಎಂಬ ವಿಚಾರ ತಿಳಿಯಿತು, ಆದರೆ ಯಾವ ಔಷಧಿಗೆ ಸಂಬಂಧಪಟ್ಟಂತೆ ಎಂಬುದು ಗೊತ್ತಿಲ್ಲ. ಅವರು ಯಾರು ಯಾರಿಗೆ ಮೇಲೆ ಹೇಳಿದ ಇಂಜೆಕ್ಷನ್ ನ್ನು ಮಾರಾಟ ಮಾಡುತ್ತಿದ್ದರು ಎಂಬುದು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಮಾಡಿಕೊಂಡಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ವಿಶೇಷ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ದಾಖಲೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ವಿಶೇಷ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ 2ನೇ ಆರೋಪಿತರು ಕೇರಳದ ಎರ್ನಾಕುಲಂ ರವರು ಎಂದು ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ನನಗೆ ಮಲೆಯಾಳಿ ಭಾಷೆ ಮಾತನಾಡಲು ಬರುತ್ತದೆ. ಅವರು ಮಲೆಯಾಳಿ ಭಾಷೆ ಮಾತನಾಡುತ್ತಿದ್ದುದರಿಂದ ನನ್ನ ಅಂಗಡಿಗೆ ಬರುತ್ತಿದ್ದರು ಎಂದರೆ ಸರಿಯಲ್ಲ. ಎನ್ ಎಸ್ ಮೆಡಿಕಲ್ಸ್ ಅಂಗಡಿಯ ಬಾಗಿಲು ತೆರೆಯದೇ ಇದ್ದಾಗ ಅವರು ನನ್ನ ಅಂಗಡಿಗೆ ಬಂದು ಮಾತನಾಡುತ್ತಾ ಕುಳಿತುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾನು ಈ ಆರೋಪಿತರಲ್ಲಿ ಯಾಕೆ ಪದೇ ಪದೇ ಬರುತ್ತೀರಾ ಎಂದು ಕೇಳಿದಾಗ ಸದರಿಯವರು ಎನ್ ಎಸ್ ಮೆಡಿಕಲ್ಸ್ ನಲ್ಲಿ ಮೇಲೆ ಹೇಳಿದ ಇಂಜೆಕ್ಷನ್ ನ್ನು ಖರೀದಿ ಮಾಡಲು ಬರುತ್ತಿರುವುದಾಗಿ ಹೇಳಿದರು ಎಂದರೆ ಸರಿಯಲ್ಲ. 2009ರ ಅಕ್ಟೋಬರ್ ತಿಂಗಳಿನಲ್ಲಿ 1ನೇ ಆರೋಪಿತರನ್ನು ಪೊಲೀಸರು ದಸ್ತಗಿರಿ ಮಾಡಿದರು ಎನ್ನುವ ವಿಚಾರ ಗೊತ್ತಿತ್ತು ಎಂದರೆ ಸಾಕ್ಷಿಯು ಅವರನ್ನು ಬಂಧಿಸಿದ್ದು ಗೊತ್ತು ಆದರೆ ತಿಂಗಳು ದಿನಾಂಕ ನೆನಪಿಲ್ಲ

ಎನ್ನುತ್ತಾರೆ. 1ನೇ ಆರೋಪಿತರು ಡಾಃ ಶಶಿಧರ್ ಡಿಡಿ ಇವರ ಹೆಸರಿನಲ್ಲಿ ಅವರ ಲೆಟರ್ ಹೆಡ್ ಮತ್ತು ಸಹಿಯನ್ನು ಫೋರ್ಜರಿ ಮಾಡಿ ಶಿವಮೊಗ್ಗದ ರಾಜು ಏಜೆನ್ಸಿಯಿಂದ ಮೇಲೆ ಹೇಳಿದ ಔಷಧಿಯನ್ನು ತರಿಸುತ್ತಿದ್ದರು ಎಂಬ ವಿಚಾರ ಗೊತ್ತಿತ್ತು ಎಂದರೆ ಸರಿಯಲ್ಲ. ಸದರಿ ಇಂಜೆಕ್ಷನ್ ನ್ನು ಕೇರಳದ ನಾಸಿರ್ ಮತ್ತು ಷಹಜಹಾನ್ ಅಂದರೆ ಈ ಪ್ರಕರಣದ ನ್ಯಾಯಾಲಯದ ಮುಂದಿರುವ 2ನೇ ಆರೋಪಿ ಹಾಗೂ ಇನ್ನೋರ್ವ 3ನೇ ಆರೋಪಿ ಹಾಗೂ ಇತರರಿಗೆ ಮಾರಾಟ ಮಾಡುತ್ತಿದ್ದರು ಎನ್ನುವ ವಿಚಾರ ನನಗೆ ನಂತರದಲ್ಲಿ ಗೊತ್ತಾಯಿತು ಎಂದರೆ ಸರಿಯಲ್ಲ. ನಂತರ 2ನೇ ಆರೋಪಿತರನ್ನು ಕೇರಳದ ಎರ್ನಾಕುಲಂನಲ್ಲಿ ಪೊಲೀಸರು ಬಂಧಿಸಿ ಕರೆದುಕೊಂಡು ಬಂದಿದ್ದರು, ಆಗ ನಾನು ಠಾಣೆಯಲ್ಲಿ ಅವರನ್ನು ಗುರುತಿಸಿ ಈ ವ್ಯಕ್ತಿ ನನ್ನ ಬೇಕರಿಗೆ ಆಗಾಗ ಬಂದು ಕುಳಿತುಕೊಳ್ಳುತ್ತಿದ್ದರು ಮತ್ತು ಮೇಲೆಹೇಳಿದ ಇಂಜೆಕ್ಷನ್ ನ್ನು ಎನ್.ಎಸ್ ಮೆಡಿಕಲ್ಸ್ ನಿಂದ ಖರೀದಿ ಮಾಡುತ್ತಿದ್ದರು ಮತ್ತು ಅದನ್ನು ನನಗೆ ತೋರಿಸುತ್ತಿದ್ದರು ಎಂದರೆ ಸರಿಯಲ್ಲ. 2ನೇ ಆರೋಪಿತರು ನನ್ನ ಬೇಕರಿ ಬಳಿ ಬಂದು ಕುಳಿತುಕೊಂಡು ತಾನು 1ನೇ ಆರೋಪಿತರಿಗೆ ಮೇಲೆ ಹೇಳಿದ ಇಂಜೆಕ್ಷನ್ ನ್ನು ಖರೀದಿಸಲು 30ಸಾವಿರ ರೂಪಾಯಿ ಕೊಟ್ಟಿದ್ದೇನೆ, ಅದನ್ನು ಪಡೆಯಲು ಬಂದಿದ್ದೇನೆ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ಈ ಎಲ್ಲ ವಿಚಾರವಾಗಿ ನಾನು ದಿಃ19-3-10ರಂದು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಹೇಳಿಕೆಯ ಭಾಗವನ್ನು ನಿಪಿ- 63 ಎಂದು ಗುರುತಿಸಲಾಯಿತು. ಕೇಸಿನ ವಿಷಯ ಗೊತ್ತಿದ್ದು ಆ ಬಗ್ಗೆ ನಿಪಿ-63 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುದುವರೆದು ತುಂಬಾ ಜನರು ಬರುತ್ತಿದ್ದರು, ಅವರಲ್ಲಿ ಇವರೂ ಇದ್ದಿರಬಹುದು ಈಗ ನೆನಪಿಲ್ಲ ಎನ್ನುತ್ತಾರೆ.

**ಪಾಟೀಸವಾಲುಃ 1ನೇ ಆರೋಪಿ ಪರ** ಶ್ರೀ ಎ ಹೆಚ್ ಬಿ **ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ.

**ಪಾಟೀಸವಾಲುಃ** 2ನೇ **ಆರೋಪಿ ಪರ** ಶ್ರೀ ಜೆ ಎಸ್**ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**